ಎಲ್‌ಓಸಿ ಸ್ಕಾಪ್ ಮಾಡಿ ಎಂದು ಟೆಲಿಗ್ರಾಂ ಕಳಿಸುತ್ತೇನೆ. ಮಾನ್ಯ ಚೀಫ್ ಇಂಜಿನಿಯರ್‌ಗೆ ಟೆಲಿಫೋನ್ ಮಾಡಿ ಎಲ್‌ಓಸಿ ಸ್ಕಾಪ್ ಮಾಡಿ ಎಂದು ಹೇಳುತ್ತೇನೆ, ಇದೊಂದು.

(ಮಾನ್ಯ ರಮೇಶ್ ಕುಮಾರ್ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) ಸೋಮವಾರ, ಮಂಗಳವಾರ ಮೂರು ದಿವಸ ನಮ್ಮ ಉನ್ನತ ಅಧಿಕಾರಿಯನ್ನು ಕಳಿಸಿ ತನಿಖೆ ಮಾಡಿಸುತ್ತೇನೆ. ನಾಲ್ಕನೆಯ ದಿವಸ ತಾವು ಹೇಳಿದ ಮಾತು ನಿಜವಾದರೆ ಸಸ್ಪೆಂಡ್ ಮಾಡುತ್ತೇನೆ. ತಾವು ಹೇಳಿದ ಮಾತು ನಿಜವಲ್ಲದಿದ್ದರೆ ನೀವು ರಾಜೀನಾಮೆ ಕೊಟ್ಟು ಹೋಗಬೇಕು, ನಾನು ಈ ಸದನಕ್ಕೆ ಬರಕೂಡದು.

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಆ ಸವಾಲನ್ನು ಸ್ವೀಕಾರ ಮಾಡುತ್ತೇನೆ. ಅದರಲ್ಲಿ ಏನೂ ದೋಷ ಆಗಿಲ್ಲ ಎಂದರೆ, ನಾನು ಸುಳ್ಳು ಆಪಾದನೆ ಮಾಡಿದ್ದೇನೆಂದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ಎಚ್‌ಆರ್‌ವಿ ಡಿವಿಜನ್ ನೋಡಿ.

ಶ್ರೀ ಕೆ. ಎನ್. ನಾಗೇಗೌಡ : ನಾನು ನಿಮ್ಮನ್ನು ಕಳೆದ 20 ವರ್ಷದಿಂದ ಬಲ್ಲೆ. ನೀವು ಈ ರೀತಿ ಆಪಾದನೆ ಮಾಡುವವರು ಅಲ್ಲ. ನೀವು ಜವಾಬ್ದಾರಿಯಿಂದ ನಡೆದುಕೊಳ್ಳುವವರು. ನೀವು ಗಂಭೀರವಾಗಿ ನಡೆದುಕೊಳ್ಳುವಂತಹ ಶಾಸಕರು ಆಗಿರುವುದಕ್ಕೆ ನಾನು ಅಂತಹ ಕಟ್ಟುನಿಟ್ಟಾಗಿ ಹೇಳುತ್ತೇನೆ. ಸರ್ಕಾರ ಯಾರು ತಪ್ಪು ಮಾಡಿದ್ದಾರೆ, ಅವರನ್ನು ಮೂರು ದಿವಸದೊಳಗೆ ಪತ್ತೆ ಹಚ್ಚಿ ಸಸ್ಪೆಂಡ್ ಮಾಡುವುದು ಒಂದೇ ಅಲ್ಲ. ನಾನು ಶೀಘ್ರ ಕ್ರಮ ತೆಗೆದುಕೊಳ್ಳುತ್ತೇನೆ.

(ಏ) ಶಾಸಕರಿಗೆ ತಿಳಿಸದೆ ಕ್ಷೇತ್ರದಲ್ಲಿ ಸಭೆ ಸಮಾರಂಭ ನಡೆಸುವುದು

ಶ್ರೀ ಕೆ. ಎನ್. ಗದ್ದಿ : ಮಾನ್ಯ ಅಧ್ಯಕ್ಷರೆ, ಈಗ ಒಂದು ಆಮಂತ್ರಣ ಪತ್ರಿಕೆ ಇದೆ. ಮಾನ್ಯ ನಗರಾಭಿವೃದ್ಧಿ ಸಚಿವರಾದಂತಹ ಬಚ್ಚೇಗೌಡರು ಒಂದು ಯೋಜನೆಗೆ ಮಂಜೂರಾತಿ ನೀಡಿ ಆ ಕಾರ್ಯಕ್ರಮಕ್ಕೆ ಅಡಿಗಲ್ಲು ಹಾಕುತ್ತಿದ್ದಾರೆ ಮತ್ತು ಜಿಲ್ಲಾ ಮುಖ್ಯ ಸಚಿವರಾದಂತಹ ಎಸ್. ಎಸ್. ಪಾಟೀಲ್ ಅವರು ಸಹ ಈ ಸಮಾರಂಭದಲ್ಲಿ ಭಾಗವಹಿಸುತ್ತಿದ್ದಾರೆ. ಈ ಸಮಾರಂಭದ ಅಧ್ಯಕ್ಷತೆಯನ್ನು ಅಲ್ಲಿಯ ಪುರಸಭೆಯ ಅಧ್ಯಕ್ಷರಿಗೆ ಕೊಟ್ಟಿದ್ದಾರೆ. ನಾನು ಶಾಸಕನಾಗಿ ಈ ಸ್ಕೀಮ್ ಸ್ಯಾಂಕ್ಷನ್ ಮಾಡಿಸುವ ಸಲುವಾಗಿ ಶತಪ್ರಯತ್ನ ಮಾಡಿದ್ದೇನೆ. ಈ ಕಾರ್ಯಕ್ರಮವನ್ನು ನನಗೆ ತಿಳಿಸದೇ ಹಮ್ಮಿಕೊಂಡಿರುವಂತಹ ನೀತಿಯನ್ನು ನಾನು ಸಂಪೂರ್ಣವಾಗಿ ಪ್ರತಿಭಟಿಸುತ್ತೇನೆ. ಇವತ್ತು ಈ ಕಾರ್ಯಕ್ರಮವನ್ನು ರದ್ದು ಮಾಡಬೇಕು. ಪುನಃ ನನ್ನ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಮಾಡಬೇಕು. ಪುರಸಭೆಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಮಾಡಿದ್ದಾರೆ. ನಾನು ಶಾಸಕನಾಗಿದ್ದೇನೆ. ನನಗೆ ತಿಳಿಸದೇ ಹೇಗೆ ಕಾರ್ಯಕ್ರಮ ಮಾಡಿದ್ದಾರೆ ? ದಯಮಾಡಿ ತಾವು ನಮ್ಮ ರಕ್ಷಣೆಗೆ ಬಂದು ಇದಕ್ಕೆ ಒಂದು ನ್ಯಾಯವನ್ನು ಒದಗಿಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಎಸ್ ಎಸ್. ಪಾಟೀಲ್ ಅವರೇ ನಾನು ಆ ಇನ್‌ವಿಟೇಷನ್ ಅನ್ನು ನೋಡಿದೆ. ಅವರು ಮುನಿಸಿಪಾಲಿಟಿ ಕಾರ್ಯಕ್ರಮ ಎಂದು ನೆಪ ಒಡ್ಡಬಹುದು. ಆದರೆ ಕೆಯುಡಬ್ಲ್ಯುಎಸ್‌ಎಸ್‌ಬಿ ಕಾರ್ಯಕ್ರಮ ಆಗುತ್ತಿದೆ, ಸರ್ಕಾರ ಅದಕ್ಕೆ ಹಣ ಕೊಡುತ್ತಿದ್ದೀರಿ. ಶಾಸಕರದ್ದು ಕಡೆಯ ಹೆಸರಾಗಿ ಹಾಕುತ್ತಾರೆ. ಆ ತರಹ ಮಾಡಬಾರದು, ಅದು ಚೆನ್ನಾಗಿ ಕಾಣುವುದಿಲ್ಲ ಎಲ್ಲೋ ಒಂದು ಕಡೆಗೆ ಅದು

ಗೌರವ ತರುವುದಿಲ್ಲ. ಏಕೆ ಈ ತರಹ ಮಾಡುತ್ತೀರಿ ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸರ್ಕಾರದ ಸರ್ಕ್ಯುಲರ್ ಇದೆ. ಅವರವರ ಮತಕ್ಷೇತ್ರದಲ್ಲಿ ಯಾವುದೇ ಕಾರ್ಯಕ್ರಮ ಆದರೂ ಪ್ರಿಸೈಡ್ ಮಾಡಬೇಕು ಎಂದು ಇದೆ. ಆದರೆ ಇವರಿಗೆ ಮಾತ್ರ ಅದನ್ನು ಬಿಡಿಸಿ ಇವರ ಹೆಸರು ಎಲ್ಲೋ ಕೆಳಗಡೆ ನಮೂದು ಮಾಡಿದ್ದಾರೆ.

ಅಧ್ಯಕ್ಷರು : ನೀವು ಇನ್‌ವಿಟೇಷನ್ ನೋಡಿದ್ದೀರಾ ? ಯಾವ ತರಹ ಮಾಡಿದ್ದಾರೆ ನೋಡಿ.

ಶ್ರೀ ಕೆ. ಎನ್. ಗದ್ದಿ : ಮಾನ್ಯ ಬಚ್ಚೇಗೌಡರು ಬಹಳಷ್ಟು ಪ್ರಯತ್ನ ಮಾಡಿ ಹೋರಾಟ ಮಾಡಿದ್ದಾರೆ.ಅವರು ನಗರಾಭಿವೃದ್ಧಿ ಸಚಿವರಾಗಿದ್ದಾಗ ಎಷ್ಟು ಪ್ರಯತ್ನ ಮಾಡಿದ್ದಾರೆ. ಮಂಜೂರಾತಿ ಆಗಿದೆ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ನವಲುಗುಂದ ಮತ್ತು ಅಣ್ಣಿಗೇರಿ ಇವೆರೆಡೂ ಮಾನ್ಯ ರೆಡ್ಡಿಯವರ ಕ್ಷೇತ್ರ. ಆ ಪಟ್ಟಣಕ್ಕೆ ಕುಡಿಯುವ ನೀರು ಇಲ್ಲ, ಅದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಕಳೆದ ನಾಲ್ಕು ವರ್ಷಗಳಿಂದಲೂ ಅವರ ಪ್ರಯತ್ನ ಇದೆ. ಅಲ್ಲಿ ಒಂದು ರಿಸರ್ವಾಯರ್ ಮಾಡಿ ಆ ನೀರನ್ನು ತೆಗೆದುಕೊಂಡು ಆ ನೀರನ್ನು ಎರಡೂ ಪಟ್ಟಣಕ್ಕೆ ಕೊಡಬೇಕು ಎಂದು ಆದಂತಹ ಯೋಜನೆ. ನವಲುಗುಂದ ಇನ್ನೂ ಆಗಿಲ್ಲ. ಅಣ್ಣಿಗೇರಿ ಆಗಿದೆ. ಎರಡೂ ಅವರ ಕ್ಷೇತ್ರಕ್ಕೆ ಬರುತ್ತದೆ. ಅಣ್ಣಿಗೇರಿಯಲ್ಲಿ ಇತ್ತೀಚೆಗೆ ವ್ಯವಸ್ಥೆ ಆಗಿದೆ. ನಮ್ಮ ಮಾನ್ಯ ಎಸ್. ಎಸ್. ಪಾಟೀಲ್ ಅವರಿಗೂ ಗೊತ್ತು. ಅವರ ಪ್ರಯತ್ನವೂ ಇದೆ. ಅಣ್ಣಿಗೇರಿಗೆ ಕುಡಿಯುವ ನೀರಿನ ವ್ಯವಸ್ಥೆ ಆಗಿದೆ. ಅದರ ಬಗ್ಗೆ ಈಗ ಅಲ್ಲಿನ ಪಟ್ಟಣ ಪಂಚಾಯತಿಯ ಆಡಳಿತಾಧಿಕಾರ ಯಾರ ಕೈಯಲ್ಲೋ ಇದೆ. ಶಾಸಕರು ಇವರು, ಇನ್‌ವಿಟೇಷನ್ ಇವತ್ತು ನಾನು ನೋಡಿದೆ. ನಾನು ಆ ಇಲಾಖೆಯಲ್ಲಿ ಇಲ್ಲ. ಎಸ್. ಎಸ್. ಪಾಟೀಲ್ ಅವರು ಮಾನ್ಯ ನಗರಾಭಿವೃದ್ಧಿ ಸಚಿವರು, ಮಾನ್ಯ ಗದ್ದಿಯವರು ಬಂದು ಆಮಂತ್ರಣ ಪತ್ರಿಕೆ ತೋರಿಸಿದರು. ಈ ರೀತಿ ಮಾಡಿದ್ದಾರೆ ನೋಡಿ ಎಂದು ತೋರಿಸಿದರು. ನನ್ನ ಹೆಸರು ಮುಖ್ಯ ಅತಿಥಿಗಳಲ್ಲಿ ಕಡೆಯದಾಗಿದೆ. ಅಧ್ಯಕ್ಷರು, ಟೌನ್ ಪಂಚಾಯತಿಯ ಅಧ್ಯಕ್ಷರನ್ನು ಹಾಕಿದ್ದಾರೆ. ಇದು ಪ್ರೋಟೊಕಾಲ್ ಪ್ರಕಾರ ಸರಿಯಿಲ್ಲದಿರುವುದರಿಂದ ನೀವು ತಡೆಹಿಡಿಯಬೇಕೆಂದು ಹೇಳಿದರು. ಆಹ್ವಾನ ಪತ್ರಿಕೆಯಲ್ಲಿ ನನ್ನ ಹಾಗೂ ಎಸ್.ಎಸ್.ಪಾಟೀಲ್‌ರವರ ಹೆಸರುಗಳು ನಮೂದಾಗಿರುವುದನ್ನು ನೋಡಿದ್ದೇನೆ, ಅದನ್ನು ತಮಗೂ ತೋರಿಸಿ ನನ್ನ ಹಕ್ಕಿಗೆ ಚ್ಯುತಿಯುಂಟಾಗಿರುವುದಲ್ಲದೆ ಮನಸ್ಸಿಗೆ ನೋವಾಗಿರುವುದರಿಂದ ನಿಗದಿತ ದಿನಾಂಕದಂದು ನಡೆಯುವ ಕಾರ್ಯಕ್ರಮವನ್ನು ನಿಲ್ಲಿಸಿ, ಮುಂದೂಡಿ ಆಗಿರುವ ತಪ್ಪನ್ನು ಸರಿಪಡಿಸಿ ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರನ್ನು ಸೇರಿಸಬೇಕೆಂದು ಮಾನ್ಯ ಸದಸ್ಯರು ಈಗ ಹೇಳುತ್ತಿದ್ದಾರೆ. ಆ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿರುವ ಎಸ್. ಎಸ್. ಪಾಟೀಲರಿಗೆ ಆ ಕಾರ್ಯಕ್ರಮದ ಬಗ್ಗೆ ಗೊತ್ತಿದ್ದು, ತಮ್ಮ ಅಭಿಪ್ರಾಯವೇನಿದೆ, ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ ಮತ್ತು ತಮ್ಮ ಸೂಚನೆಯಂತೆ ನಡೆದುಕೊಳ್ಳುತ್ತೇವೆ.

ಶ್ರೀ ಎಸ್. ಎಸ್. ಪಾಟೀಲ್ : ಅಧ್ಯಕ್ಷರೆ, ಇದನ್ನು ಪುರಸಭೆಯವರು ಮಾಡಿದ್ದು, ಅವರು ಕಳುಹಿಸಿದ ಆಹ್ವಾನ ಪತ್ರಿಕೆಯನ್ನು ಇವೊತ್ತು ನಾನು ನೋಡಿರುವುದರಿಂದ ಸಂಬಂಧಪಟ್ಟವರಿಗೆ ಖಂಡಿತವಾಗಿಯೂ ಫೋನ್ ಮಾಡಿ ಶಾಸಕರ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನಡೆಸುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಎನ್. ಗದ್ದಿ : ಅಲ್ಲಿನ ನೀರು ಸರಬರಾಜು ಯೋಜನೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನನ್ನನ್ನೂ ಒಳಗೊಂಡಂತೆ ಇತರ ಅತಿಥಿಗಳನ್ನು ಬರಮಾಡಿಕೊಂಡು ಕಾರ್ಯಕ್ರಮ ನಡೆಸಬೇಕು. ಆದರೆ, ಆ ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕನಾದ ನನಗೆ ಹೇಳದೆ ಕಾರ್ಯಕ್ರಮ ನಡೆಸುವುದು ನ್ಯಾಯವೇ? ತಾವೇ ಹೇಳಿ.

ಅಧ್ಯಕ್ಷರು : ನೀನು ಇನ್ನು ಚಿಕ್ಕವ, ನನ್ನ ತಮ್ಮನಿದ್ದಂತೆ. ನಿನ್ನ ಗೌರವಕ್ಕೆ ಏನೂ ತೊಂದರೆಯಾಗದಂತೆ ನಿನ್ನ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನಡೆಸುವುದಾಗಿ ಈಗ ಮಂತ್ರಿಗಳು ಮಾತು ಕೊಟ್ಟಿದ್ದಾರೆ. ಒಂದು ಸಾರ್ವಜನಿಕ ಕಾರ್ಯಕ್ರಮವೆಂದರೆ ಎಲ್ಲರೂ ಸೇರಿ ವ್ಯವಸ್ಥೆ ಮಾಡಿರುತ್ತಾರೆ. ನಡೆಯಬೇಕಿರುವ ಕಾರ್ಯಕ್ರಮವನ್ನು ರದ್ದುಗೊಳಿಸಿದರೆ, ಶಾಸಕರು ಹೋಗಿ ಕಾರ್ಯಕ್ರಮವನ್ನು ನಿಲ್ಲಿಸಿದರು ಎಂದು ತಿಳಿದರೆ ನಿನಗೆ ಅವರು ಮತ್ತೆ ತೊಂದರೆ ಕೊಡುತ್ತಾರೆ. ಮನಸ್ಸನ್ನು ಸ್ವಲ್ಪ ಸಮಾಧಾನ ಮಾಡಿಕೋ. ನಿನಗೆ ಬೇಸರವಾಗಿದೆಯೆಂದು ನನಗೆ ಗೊತ್ತಾಗುತ್ತದೆ. ಇದು ಮುಂದೆ ಪುನರಾವರ್ತನೆಯಾಗದಂತೆ ನೋಡಿಕೊಳ್ಳುತ್ತೇವೆ ಮತ್ತು ಆ ಕಾರ್ಯಕ್ರಮವನ್ನು ನಿನ್ನ ಅಧ್ಯಕ್ಷತೆಯಲ್ಲಿಯೇ ನಡೆಯುವುದಕ್ಕೆ ಏರ್ಪಾಟು ಮಾಡುತ್ತೇವೆ.

ಶ್ರೀ ಕೆ.ಎನ್. ಗದ್ದಿ : ನನ್ನ ಅಧ್ಯಕ್ಷತೆಯಲ್ಲಿ ಮಾಡದೆ ಅವರು ಹೇಗೆ ಕಾರ್ಯಕ್ರಮ ನಡೆಸುತ್ತಾರೆ ?

ಅಧ್ಯಕ್ಷರು : ಈ ವ್ಯವಸ್ಥೆ ಇರುವುದು ಹಾಗೆ !

ಶ್ರೀ ಕೆ. ಎನ್. ಗದ್ದಿ : ಇವರ ಕೈಯಲ್ಲಿ ಅಧಿಕಾರವಿದೆಯೆಂದು ಇವರ ಮನಸ್ಸಿಗೆ ಬಂದಂತೆ ಮಾಡುವುದೇ ? ಇದು ಸರಿಯೇ ?

ಶ್ರೀ ಎಸ್. ಎಸ್. ಪಾಟೀಲ್ : ಇದನ್ನು ಸರ್ಕಾರದವರು ಮಾಡಿಲ್ಲ, ಮುನಿಸಿಪಾಲಿಟಿಯವರು ಆ ರೀತಿ ಮಾಡಿದ್ದಾರೆ.

ಅಧ್ಯಕ್ಷರು : ಬಚ್ಚೇಗೌಡರೆ, ಕೆ. ಯು. ಡಬ್ಲ್ಯೂ. ಎಸ್. ಎಸ್. ಬಿ.ಯ ಮ್ಯಾನೇಜಿಂಗ್ ಡೈರೆಕ್ಟರ್ ಆದ ಶ್ರೀನಿವಾಸರೆಡ್ಡಿಯವರು ಒಳ್ಳೆಯ ಅಧಿಕಾರಿಯಾಗಿದ್ದು ವೈಯಕ್ತಿಕವಾಗಿ ಅವರನ್ನು ನಾನು ಬಲ್ಲೆ. ಅವರಿಗೆ ತಾವು ಈ ಕುರಿತು ಒಂದು ಮಾತು ಹೇಳಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನಡೆಯುವುದೆಂದು ಕಾರ್ಡುಗಳನ್ನು ಪ್ರಿಂಟ್ ಮಾಡಿಸುವಂತೆ ತಿಳಿಸಬೇಕು.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನೆರವೇರಿಸಲಾಗುವುದೆಂದು ಕಲ್ಲಿನಲ್ಲಿ ಅವರ ಹೆಸರನ್ನು ಹಾಕಿಸಿ ಪ್ರೊಟೊಕಾಲ್ ಪ್ರಕಾರ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಕೆಲವು ಮಹತ್ವವಿರುವ ಪ್ರಶ್ನೆಗಳನ್ನು ಈ ಸದನದಲ್ಲಿ ನಾವು ಸರ್ಕಾರದ ಗಮನಕ್ಕೆ ತಂದಿದ್ದು, ಎಲ್ಲಾ ಇಲಾಖಾ ಮಂತ್ರಿಗಳಿಗೆ ಸಂಬಂಧಿಸಿದಂತೆ ನಾವು ಪ್ರಶ್ನೆಗಳನ್ನು ಕೇಳಿದ್ದೆವು. ಆದರೆ, ಇವೊತ್ತಿನವರೆಗೂ ಲಿಖಿತ ಮೂಲಕವಾಗಲಿ ಅಥವಾ ಸದನದಲ್ಲಿ ಕೇಳಿದಂಥ ಪ್ರಶ್ನೆಗಳಿಗೆ ಉತ್ತರಗಳು ಬರಲಿಲ್ಲ. ಸತತವಾಗಿ ಎರಡು- ಮೂರು ವರ್ಷಗಳಿಂದಲೂ ಪ್ರಶ್ನೆಗಳಿಗೆ ಉತ್ತರಗಳು ಬಾರದಿರುವಂಥ ಸಾಕಷ್ಟು

ನಿದರ್ಶನಗಳಿವೆ. ಇದರ ಬಗ್ಗೆ ತಾವು ಮೊನ್ನೆ ದಿವಸ ಮಾತನಾಡಿ ಯಾರು ಉತ್ತರ ಕೊಡುಲಿಲ್ಲವೋ ಆ ಮಂತ್ರಿಗಳಿಗೆ ಸೂಚನೆ ಕೊಟ್ಟು ತಕ್ಷಣ ಉತ್ತರಗಳನ್ನು ಒದಗಿಸಿಕೊಡುವಂಥ ವ್ಯವಸ್ಥೆ ಮಾಡುತ್ತೇನೆ ಅಥವಾ ನನ್ನ ವ್ಯಾಪ್ತಿಯಲ್ಲಿ ಅವರ ಮೇಲೆ ಕ್ರಮ ಜರುಗಿಸುವ ಕುರಿತು ಆಲೋಚಿಸುತ್ತೇನೆ ಎಂದು ಹೇಳಿದಿರಿ. ಆದುದರಿಂದ ತಮ್ಮಲ್ಲಿ ನನ್ನ ಮನವಿಯೇನೆಂದರೆ ನಾವು ಕೇಳಿರುವಂಥ ಕೆಲವು ಪ್ರಶ್ನೆಗಳಿಗೆ ಇವೊತ್ತಿನವರೆವಿಗೂ ಉತ್ತರ ಬಾರದಿರುವ ಕಾರಣ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳ ಮೇಲೆ ತಾವು ಯಾವ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳುತ್ತೀರೆಂಬುದೇ ನನ್ನ ಪ್ರಶ್ನೆಯಾಗಿದೆ.

ಅಧ್ಯಕ್ಷರು : ಅವರನ್ನೆಲ್ಲಾ ಕರೆಸಿ ಮಾತನಾಡಿ, ಮುಖ್ಯ ಕಾರ್ಯದರ್ಶಿಯವರೊಂದಿಗೂ ಸಹ ಚರ್ಚಿಸಿ ಆದಷ್ಟು ಬೇಗ ನಿಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ಕಳುಹಿಸಿ ಕೊಡುವಂಥ ಪ್ರಯತ್ನ ಮಾಡುತ್ತೇನೆ. ನಾಗೇಗೌಡರೆ, ಬಚ್ಚೇಗೌಡರೆ, ತಾವುಗಳು ದಯಮಾಡಿ ಯಾರಾದರೂ ಒಬ್ಬರನ್ನು ವಿಧಾನ ಪರಿಷತ್ತಿಗೆ ಕಳುಹಿಸಿ ಅಲ್ಲಿ ಬಿಲ್ ಏನಾಗಿದೆ ಎಂಬುದನ್ನು ತಿಳಿದುಕೊಂಡು ಬಂದರೆ ಇಲ್ಲಿ ಈ ವಿಷಯದ ಕಲಾಪ ಮುಗಿದ ತಕ್ಷಣ ಅಡ್ಜರ್ನ್ ಮಾಡಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಗದ್ದಿಯವರಿಗೆ ಒಂದು ಚಿಕ್ಕ ಸಮಸ್ಯೆ ಉಂಟಾಗಿದೆ. ಏನೆಂದರೆ, ಅಲ್ಲಿ ಐದನೇ ತಾರೀಖಿನಂದು ನಡೆಯುವ ಕಾರ್ಯಕ್ರಮ ಈಗಾಗಲೇ ನಿಗದಿಯಾಗಿರುವುದರಿಂದ ಆಹ್ವಾನ ಪತ್ರಿಕೆಯನ್ನು ರೀಪ್ರಿಂಟ್ ಮಾಡಿಸುತ್ತೇವೆಂದು ಮಾನ್ಯ ಸಚಿವರಾದ ಬಚ್ಚೇಗೌಡರು ಹೇಳಿದರು. ನಾಳೆ ನಾಲ್ಕನೇ ತಾರೀಖು ಭಾನುವಾರವಾಗಿದ್ದು ಐದನೇ ತಾರೀಖು ಸೋಮವಾರವಾಗಿದೆ. ಯಾವುದೇ ಕ್ಷೇತ್ರದಲ್ಲಿ ಒಂದು ಕಾರ್ಯಕ್ರಮ ನಡೆಸುವುದಾದರೆ ಆ ಕ್ಷೇತ್ರದ ಶಾಸಕರನ್ನು ಒಳಗೊಂಡಂತೆ ಇತರರೆಲ್ಲರಿಗೂ ಆಹ್ವಾನ ಪತ್ರಿಕೆಗಳನ್ನು ಕೊಟ್ಟು ಸಮಾರಂಭಕ್ಕೆ ಕರೆಸಿ ಕಾರ್ಯಕ್ರಮ ನೆರವೇರಿಸಬೇಕೆಂಬುದು ಸಹಜವಾಗಿಯೇ ಎಲ್ಲಾ ಮತಕ್ಷೇತ್ರಗಳ ಶಾಸಕರುಗಳ ಇಚ್ಛೆಯಾಗಿರುತ್ತದೆ. ಆದರೆ, ಶಾಸಕರುಗಳನ್ನು ಬದಿಗೊತ್ತಿ ಮುನಿಸಿಪಲ್ ಪ್ರೆಸಿಡೆಂಟ್‌ರವರೇ ನೇತೃತ್ವ ವಹಿಸಿ ಅವರೇ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ, ಮುತುವರ್ಜಿ ವಹಿಸಿ ಶಾಸಕರನ್ನು ಕಡೆಗಣಿಸಿರುವುದು ಅಷ್ಟು ಸಮಂಜಸವೆನಿಸುವುದಿಲ್ಲ. ಅಲ್ಲಿ ನಡೆಸಬೇಕಾಗಿರುವ ಕಾರ್ಯಕ್ರಮದ ತಯಾರಿಯಂತೂ ತರಾತುರಿಯಲ್ಲಿ ಆಗಿಲ್ಲದಿರುವುದರಿಂದ ಕಾರ್ಯಕ್ರಮವನ್ನು ನಾಲ್ಕೈದು ದಿವಸಗಳ ಕಾಲ ಮುಂದೂಡಿ ಆಹ್ವಾನಪತ್ರಿಕೆಗಳನ್ನು ರೀಪ್ರಿಂಟ್ ಮಾಡಿಸಬೇಕು. ಇಲ್ಲದಿದ್ದರೆ, ಕಾರ್ಯಕ್ರಮ ನಡೆಸಿ ಶಾಸಕರನ್ನು ಕಡೆಗಣಿಸಿದಂತಾಗುತ್ತದೆ.

ಅಧ್ಯಕ್ಷರು : ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಒಪ್ಪಿರುವುದರಿಂದ ನೀನು (ಗದ್ದಿ) ಸಹಕರಿಸಬೇಕು.

ಶ್ರೀ ಕೆ. ಎನ್. ಗದ್ದಿ : ನನ್ನ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಸುವುದಾಗಿ ಆಹ್ವಾನಪತ್ರಿಕೆಗಳನ್ನು ಮರು ಮುದ್ರಿಸಿ ಇವರು ನನಗೆ ಯಾವಾಗ ಕೊಡಿಸುತ್ತಾರೆ ? ಅದನ್ನು ನಾನು ಯಾವಾಗ ಹಂಚಲಿ ? ಯಾರಿಗೆ ಹಂಚಬೇಕು ? ಹಾಗಾದರೆ, ಸಮಾರಂಭಕ್ಕೆ ಬಂದು ಸುಮ್ಮನೆ ಕುಳಿತುಕೊಳ್ಳಲೇ ?

ಅಧ್ಯಕ್ಷರು : ಗದ್ದಿ, ಈ ಸಲಕ್ಕೆ ನೀನು ದಯಮಾಡಿ ಸಹಕರಿಸಬೇಕು. ಅಲ್ಲಿ ನಡೆಯಬೇಕಿರುವ

ಕಾರ್ಯಕ್ರಮಕ್ಕೆ ಈಗಾಗಲೇ ವ್ಯವಸ್ಥೆ ಮಾಡಿರುತ್ತಾರೆ. ಕಾರ್ಯಕ್ರಮ ನಿಲ್ಲಿಸಿದರೆ ನಿನಗೆ ಕೆಟ್ಟ ಹೆಸರು ಬರುತ್ತದೆ. ಅದನ್ನವರು ಇನ್ನೊಂದು ರೀತಿಯಲ್ಲಿ ತಿರುಗಿಸುತ್ತಾರೆ. ನನ್ನ ಮಾತು ಕೇಳು, ನೀನಿನ್ನೂ ಚಿಕ್ಕ ಹುಡುಗ, ನಾನು ಅನುಭವದಿಂದ ಹೇಳುತ್ತಿದ್ದೇನೆ ಅದನ್ನು ಅವರು ನಿನಗೇ ಪ್ರತಿಕೂಲವಾಗಿ ಮಾಡುತ್ತಾರೆ, ಹಾಗೆ ಮಾಡಿಕೊಳ್ಳುವುದಕ್ಕೆ ಹೋಗಬೇಡ, ಸಿಕ್ಕಿಹಾಕಿಕೊಳ್ಳಬೇಡ. ನಿನ್ನ ಗೌರವವನ್ನು ಕಾಪಾಡುವ ದೃಷ್ಟಿಯಿಂದ ನಿನ್ನ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನಡೆಸಬೇಕೆಂದು ಹೇಳಿರುವುದರಿಂದ ಕಾರ್ಯಕ್ರಮದಲ್ಲಿ ಮಂತ್ರಿಗಳು ಉಪಸ್ಥಿತರಿದ್ದು ಅವರು ನಿನ್ನ ಬಗ್ಗೆ ಎರಡು ಒಳ್ಳೆಯ ಮಾತುಗಳನ್ನಾಡುತ್ತಾರೆ. ಈ ಸಲಕ್ಕೆ ನೀನು ದಯಮಾಡಿ ಸಹಕರಿಸಬೇಕು. ಕಾರ್ಯಕ್ರಮವನ್ನು ಮುಂದೂಡುವುದು ಬೇಡ. ಈಗ ನನ್ನ ಮಾತು ಕೇಳು, ನಿನಗೇನೂ ತೊಂದರೆಯಾಗುವುದಿಲ್ಲ. ನಾನು ನಿನ್ನನ್ನು ಪ್ರೀತಿ ಮಾಡುತ್ತೇನೆನ್ನುವ ವಿಶ್ವಾಸ ನಿನಗಿದೆಯೇ? ನಾನು ನಿನಗೆ ಅನ್ಯಾಯ ಮಾಡುವಂಥ ಕೆಲಸ ಮಾಡಿಸುತ್ತಿಲ್ಲ.

ಶ್ರೀ ಕೆ. ಎನ್. ಗದ್ದಿ : ಮಾನ್ಯ ಅಧ್ಯಕ್ಷರೆ, ನಿಮ್ಮ ಬಗ್ಗೆ ನನಗೆ ನೂರಕ್ಕೆ ನೂರರಷ್ಟು ವಿಶ್ವಾಸವಿದೆ, ಇಲ್ಲವೆಂದು ಹೇಳುವುದಿಲ್ಲ. ಆದರೆ, ಅವರ ಬಗ್ಗೆ ಈಗ ನನಗೆ ವಿಶ್ವಾಸವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಒಂದು ಕೆಲಸ ಮಾಡೋಣ. ಏನೆಂದರೆ, ಲೀಡಿಂಗ್ ನ್ಯೂಸ್ ಪೇಪರ್‌ನಲ್ಲಿ ಜಾಹೀರಾತು ಕೊಟ್ಟು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಯುವುದಾಗಿ ತಿಳಿಸಿದರೆ, ಮತ್ತು ನ್ಯೂಸ್ ಪೇಪರ್‌ನಲ್ಲಿ ಅವರು ಹಾಕಿದರೆ ಅದು ಒಂದೇ ದಿವಸದಲ್ಲಿ ಸರ್ಕ್ಯುಲೇಟ್ ಆಗುತ್ತದೆ. ಇದರಿಂದ ಅವರಿಗೆ ನ್ಯಾಯ ಸಿಕ್ಕಿದಂತಾಗುತ್ತದೆ.

ಅಧ್ಯಕ್ಷರು : ನಾನು ಇದನ್ನು ಒಪ್ಪುತ್ತೇನೆ. ಬಚ್ಚೇಗೌಡರೆ, ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಒಂದು ಸಲಹೆ ಕೊಟ್ಟು, ನಿಗದಿಯಾದ ಕಾರ್ಯಕ್ರಮವನ್ನು ಮುಂದೂಡಬೇಕೆಂದು ಶಾಸಕರು ಏನು ಹೇಳಿದರು, ಕಾರ್ಯಕ್ರಮವನ್ನು ಮುಂದೂಡುವುದು ಬೇಡ. ಕೆಯುಡಬ್ಲ್ಯೂಎಸ್‌ಎಸ್‌ಬಿಯವರಿಗೆ ಹೇಳಿ ನ್ಯೂಸ್ ಪೇಪರ್‌ನಲ್ಲಿ ಜಾಹೀರಾತು ಕೊಟ್ಟು ಅವರೇ ಪ್ರಿಂಟ್ ಮಾಡಿಸಲಿ.

ಶ್ರೀ ಕೆ. ಎನ್. ಗದ್ದಿ : ಇದರ ಬಗ್ಗೆಯೇ ಪ್ರಯತ್ನ ಮಾಡುತ್ತಿಲ್ಲ, ಇನ್ನು ಜಾಹೀರಾತು ಹಾಕಿಸುತ್ತಾರೆಯೇ ? ಇದೆಲ್ಲವನ್ನೂ ಅವರೇ ಮಾಡಿದ್ದಾರೆ.

ಶ್ರೀ ಎಸ್. ಎಸ್. ಪಾಟೀಲ್ : ಒಂದು ವೇಳೆ ಅದು ನಾಳೆಯೇ ಬಂದು ಬಿಟ್ಟರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಸ್ಥಳೀಯ ಪತ್ರಿಕೆಯಲ್ಲಿ ಮತ್ತೊಂದು ಪ್ರಕಟಣೆ ಕೊಟ್ಟು ಅದು ನಾಳಿದ್ದು ಪ್ರಕಟಣೆಯಾಗುವಂತೆ ಹಾಕಿಸುತ್ತೇವೆ.

ಅಧ್ಯಕ್ಷರು : ಈಗೇನೂ ಕಾಲ ಮಿಂಚಿ ಹೋಗಿಲ್ಲ, ಈಗ ಸಂಜೆ 7.40 ಗಂಟೆಯಾಗಿದ್ದು ಪತ್ರಿಕೆಗಳಿಗೆ ತಿಳಿಸಿದರೆ ಅವರು ಬದಲಾವಣೆ ಮಾಡಿಕೊಳ್ಳುತ್ತಾರೆ. ಈ ಕುರಿತ ಜವಾಬ್ದಾರಿಯನ್ನು ನಾನು ಬಚ್ಚೇಗೌಡರಿಗೆ ಒಪ್ಪಿಸುತ್ತೇನೆ. ತಾವು ಕೆಯುಡಬ್ಲ್ಯೂಎಸ್‌ಎಸ್‌ಬಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀನಿವಾಸರೆಡ್ಡಿಯವರ ಹತ್ತಿರ ಮಾತನಾಡಿ ಶಾಸಕರ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನೆರವೇರುವುದೆಂದು ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಣೆ ಹಾಕಿಸಿಬಿಡಿ.

ಶ್ರೀ ಬಿ. ಎಸ್. ಬಚ್ಚೇಗೌಡ : ಅಧ್ಯಕ್ಷರು, ಏನು ಹೇಳಿದ್ದಾರೆ, ಆ ಪ್ರಕಾರವೇ ಮಾಡೋಣ.

ಶ್ರೀ ಕೆ. ಎನ್. ಗದ್ದಿ : ಶಾಸಕರಾದವರಿಗೆ ಸಮಾರಂಭದ ಒಂದು ಆಹ್ವಾನ ಪತ್ರಿಕೆ ಕಳುಹಿಸದೆ ಕಾರ್ಯಕ್ರಮ ನಡೆಸುವವರು ಸಮಾರಂಭಕ್ಕೆ ನನ್ನನ್ನು ಕರೆಯುತ್ತಾರೆಯೇ ? ತಾವೇ ಹೇಳಿ.

ಶ್ರೀ ಎಸ್. ಎಸ್. ಪಾಟೀಲ್ : ತಮ್ಮ ಗಮನಕ್ಕೆ ತರುವುದಾದರೆ, ಶಿರಟ್ಟಿ ಎಂ. ಎಲ್. ಎ. ರವರನ್ನು ಬಿಟ್ಟು ಜಿಲ್ಲಾ ಪಂಚಾಯಿತಿ ಕಾರ್ಯಕ್ರಮವನ್ನು ಹೆಚ್. ಕೆ. ಪಾಟೀಲರು ಮಾಡಿದರು. ಇವರುಗಳು ಅಲ್ಲಿಗೆ ಹೋಗಿಬಿಟ್ಟಿರುತ್ತಾರೆ ಆದರೆ ಜಿಲ್ಲಾಪಂಚಾಯಿತಿಯವರು ಕಾರ್ಯಕ್ರಮವನ್ನು ಮಾಡಿ ಬಿಟ್ಟಿರುತ್ತಾರೆ. ಇವರಿಗೆ ಅದು ಗೊತ್ತಿರುವುದೇ ಇಲ್ಲ. ಈ ರೀತಿಯಾಗುತ್ತದೆ. ಜಿಲ್ಲಾಪಂಚಾಯಿತಿಯ ಅಧ್ಯಕ್ಷರು ಅದನ್ನು ನಾನು ಮಾಡಬೇಕು ಎಂದು ಅವರೇ ಮಾಡಿಬಿಟ್ಟಿದ್ದರು. ಈ ರೀತಿಯಾಗುತ್ತದೆ ಹೊರತು ಉದ್ದೇಶಪೂರ್ವಕವಾಗಿ ಯಾರು ಮಾಡುವುದಿಲ್ಲ.

ಅಧ್ಯಕ್ಷರು : ಪತ್ರಿಕೆಗಳಲ್ಲಿ ಪ್ರಕಟಣೆ ಕೊಡುತ್ತಾರೆ, ತಮ್ಮದೆ ಅಧ್ಯಕ್ಷತೆಯೆಂದು ಹೇಳಿರುತ್ತಾರೆ, ಕಾರ್ಯಕ್ರಮವನ್ನು ಮುಂದು ಹಾಕುವುದು ಬೇಡ, ತಮ್ಮ ಅಧ್ಯಕ್ಷತೆಯಲ್ಲೇ ಕಾರ್ಯಕ್ರಮ ನಡೆಸುತ್ತಾರೆ. ದಯಮಾಡಿ ಸಹಕರಿಸಿ.

(ಐ) ಕಳೆದ ಅಕ್ಟೋಬರ್ ತಿಂಗಳಲ್ಲಿ ಶಾಸಕರ ಮನೆಯ ಮೇಲೆ ಗುಂಡಿನ ದಾಳಿ ನಡೆಸಿರುವುದು.

ಶ್ರೀ ಡಿ. ಎಸ್. ಮಾದಪ್ಪ (ಮಡಕೇರಿ) : ಮಾನ್ಯ ಅಧ್ಯಕ್ಷರೆ, ಕಳೆದ ಅಕ್ಟೋಬರ್ ತಿಂಗಳ ಅಧಿವೇಶನದಲ್ಲಿ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ತಮ್ಮ ಮೂಲಕ ಮಾನ್ಯ ಗೃಹಸಚಿವರಲ್ಲಿ ಅದೇ ವಿಚಾರವನ್ನು ಪ್ರಸ್ತಾಪ ಮಾಡಬಯಸುತ್ತಿದ್ದೇನೆ. ಕಳೆದ ಅಕ್ಟೋಬರ್ ತಿಂಗಳಿನಲ್ಲಿ ನನ್ನ ಮನೆಯ ಮೇಲೆ ಗುಂಡಿನ ದಾಳಿ ನಡೆದ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಈ ಅಧಿವೇಶನ ಪ್ರಾರಂಭವಾದ ಮೇಲೆ ಇದರ ಬಗ್ಗೆ ಗಮನಸೆಳೆಯುವ ಸೂಚನೆಯ ಮೂಲಕ ಸರ್ಕಾರದ ಗಮನಕ್ಕೆ ತಂದೆ, ಈಗ ಕೊನೆಯದಾಗಿ ಶೂನ್ಯವೇಳೆಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ನನ್ನ ಜಿಲ್ಲೆಯಲ್ಲಿರುವ ಪೋಲಿಸ್ ಅಧಿಕಾರಿ ನಮ್ಮನ್ನು ನೋಡಿ ನಗುತ್ತಿದ್ದಾನೆ. ಕೊಡಗು ಜಿಲ್ಲೆಯ ಪೋಲಿಸ್ ವರಿಷ್ಟಾಧಿಕಾರಿ ಸರ್ಕಾರದ ಅನುಮತಿ ಇಲ್ಲದೆ ಸಾರ್ವಜನಿಕರಿಂದ ಪೋಲಿಸ್ ಕಲ್ಯಾಣ ಮಂಟಪ ಕಟ್ಟಲು ಹಣವನ್ನು ಸಂಗ್ರಹ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಕ್ರಮ ಸಾರಾಯಿ ವಿರುದ್ಧ ಹೋರಾಟ ಮಾಡಿದ ನಿರಪರಾಧಿ ಮಹಿಳೆಯರ ಮೇಲೆ ಸುಳ್ಳು ಮೊಕದ್ದಮೆಯನ್ನು ಹೂಡಿದ್ದಲ್ಲದೆ ಸತ್ತವರ ಮೇಲು ಮೊಕದ್ದಮೆಗಳನ್ನು ಹೂಡಿರುತ್ತಾರೆ. ಇದರ ಜೊತೆಗೆ ಮಡಿಕೇರಿಯ ನನ್ನ ಮನೆಯ ಮೇಲಾದ ಗುಂಡಿನ ದಾಳಿಯ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಕಳೆದ ಐದು ತಿಂಗಳ ಹಿಂದೆ ಇದರ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಇದರ ಬಗ್ಗೆ ಸಿ.ಒ.ಡಿ. ತನಿಖೆ ಮಾಡಬೇಕೆಂದು ನಾನು ಕೇಳಿರಲಿಲ್ಲ. ಆದರೆ ಗೃಹ ಕಾರ್ಯದರ್ಶಿಯವರನ್ನು ನನ್ನ ಜಿಲ್ಲೆಗೆ ಕಳಿಸಿಕೊಟ್ಟು ಅಲ್ಲಿ ಪೋಲೀಸ್ ಇಲಾಖೆಯಿಂದ ಆಗುತ್ತಿರುವ ಅಕ್ರಮಗಳ ಬಗ್ಗೆ ಪರಿಶೀಲನೆ ಮಾಡಲು ಕೇಳಿಕೊಂಡಿದ್ದೆ . ಆದರೆ ಸದನದಲ್ಲಿ ಆ ವಿಚಾರದ ಬಗ್ಗೆ ಸಿ. ಓ. ಡಿ. ತನಿಖೆ ಮಾಡಲು ಒಪ್ಪಿಸಿದರು. ಐದು ತಿಂಗಳುಗಳಾದರು ಸಿ. ಓ.ಡಿ. ತನಿಖೆ ಏನಾಗಿದೆ